ಟಿಪ್ಪಣಿ ಹಾಳೆ

ಪುಟದ ಸಂಖ್ಯೆ ——01——

ಕಡತದ ಸಂಖ್ಯೆ .....

ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ: Improvements roads and drains at Vikasa Badavane Main and cross roads in kempegowda ward no- 01 of yelahanka Sub division.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ಉಪವಿಭಾಗದ ಕೆಂಪೇಗೌಡ ವಾರ್ಡ್ ನಂ-01 ರ ವ್ಯಾಪ್ತಿಯಲ್ಲಿ ವಿಕಾಸ ಬಡಾವಣೆ ಮುಖ್ಯ ಮತ್ತು ಅಡ್ಡರಸ್ತೆಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಲು ಸಾರ್ವಜನಿಕರು ಯಲಹಂಕ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಹಿರಿಯ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಮುಂದುವರೆದು ಯಲಹಂಕ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಮೇಲಾಧಿಕಾರಿಗಳು ಸದರಿ ಕಾಮಗಾರಿಯನ್ನು 2021-22 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3726 ರ ಕಾರ್ಯಕ್ರಮದಲ್ಲಿ ಸೇರಿಸಿ ರಸ್ತೆಗಳ ಅಭಿವೃದ್ದಿ ಮತ್ತು ಚರಂಡಿಗಳನ್ನು ಅಭಿವೃದ್ದಿ ಪಡಿಸಿಕೊಡಲು ತಿಳಿಸಿರುತ್ತಾರೆ.

ಅದರಂತೆ ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯನ್ನು 2021-22ನೇ ಸಾಲಿನ ವಾರ್ಷಿಕ ಕಾರ್ಯಕ್ರಮದಡಿಯಲ್ಲಿ ರೂ.30.00ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ 2018-19ನೇ ಸಾಲಿನಲ್ಲಿ ಮಂಜೂರಾಗಿರುವ ದರಪಟ್ಟಿಯಂತೆ ಹಾಗೂ ದಿನಾಂಕ: 2-11-2021 ರ ಪರಿಷ್ಕೃತ ದರಪಟ್ಟಿಯಂತೆ ತಯಾರಿಸಲಾಗಿದೆ.ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

1. ಹಾಲಿ ಇರುವ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತೆಗೆದು ದೂರದ ಸ್ಥಳಕ್ಕೆ ಸಾಗಿಸುವುದು.
2. ಚರಂಡಿಗಳಿಗೆ ಕೊಪಿಂಗ್ ಆಳವಡಿಸಿ ಕವರಿಂಗ್ ಸ್ಲ್ಯಾಬ್‌ಗಳನ್ನು ಹಾಕುವುದು.
3. ರಸ್ತೆಗಳಿಗೆ ಡಾಂಬರೀಕರಣ ಮಾಡಲು ಮಣ್ಣು ಅಗೆತ ಕೆಲಸ ಮಾಡುವುದು
4. ರಸ್ತೆಗಳಿಗೆ ಡಾಂಬರೀಕರಣ ಮಾಡಲು ಜಿ.ಎಸ್.ಬಿ ಮತ್ತು ವೆಟ್‌ಮಿಕ್ಸ್ ಹರಡುವುದು
5. ರಸ್ತೆಗಳಿಗೆ ಪ್ರೈಮರ್ ಕೊಟ್ ಮತ್ತು ಅಂಟು ಪದರ ಲೇಪಿಸುವುದು
6. ರಸ್ತೆಗಳಿಗೆ ಬಿ.ಎಂ. ಮತ್ತು ಬಿ.ಸಿ ಡಾಂಬರೀಕರಣ ಮಾಡುವುದು
7. ರಸ್ತೆಗಳಿಗೆ ರೊಡ್ ಮಾರ್ಕಿಂಗ್ ಮಾಡುವುದು ಇತ್ಯಾದಿ/

ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುತ್ತದೆ. ಅದ್ದರಿಂದ ಇವುಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕಾಮಗಾರಿಗೆ 2021-22ನೇ ಸಾಲಿನ ವಾರ್ಷಿಕ ಕಾರ್ಯಕ್ರಮದಡಿಯಲ್ಲಿ ಲೆಕ್ಕಶೀರ್ಷಿಕೆ ಪಿ 3726 ರಡಿ _____ ರಂತೆ ಕಾಮಗಾರಿಯ ಸಂಕೇತ ದೊರೆತಿದ್ದು ಕೆಲಸವನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿರುವುದರಿಂದ ಹಾಗೂ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಈ ಮುಂದಿನ ಆದೇಶಕ್ಕೆ ಮಂಡಿಸಿದೆ.

ಸ.ಅ (ವಾರ್ಡ್-ನಂ01)

ಸ.ಕಾ.ಅ (ಯ.ಉ.ವಿ)

ಪುಟದ ಸಂಖ್ಯೆ 07

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
4)	ಕಂಡಿಕೆ (01) ರಿಂದ (03)ರಲ್ಲಿ ವಿವರಿಸಿರುವಂತೆ 2021–22ನೇ ಸಾಲಿನ ಆಯವ್ಯಯದ (POW) ಕಾರ್ಯಾಕ್ರಮದಡಿಯಲ್ಲಿ "Improvements roads and drains at vikasa badavane main and cross roads in Kempegowda ward no 01 of Yelahanka sub division." ಎಂಬ ಕಾಮಗಾರಿಯನ್ನು ಕೈಗೊಳ್ಳಲು ರೂ.30.00ಲಕ್ಷಗಳಿಗೆ 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆ ಎಸ್.ಆರ್. ದರಪಟ್ಟಿ ಹಾಗೂ ದಿನಾಂಕ:02–11–2021ರ ಪರಿಷ್ಕೃತ ದರಪಟ್ಟಿಯನ್ನು ಅನುಸರಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ ರವರು ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ:ಬಿ12(1)ಪಿ.ಆರ್/394/2020–21 ದಿನಾಂಕ:04–02–2021 ರಂತೆ ನೀಡಿರುವ ಅಧಿಕಾರದನ್ವಯ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ ಹಾಗೂ ಡಿ.ಟಿ.ಎಸ್. ಅನುಮೋದನೆ ನೀಡಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ. ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ
5)	ಮುಖ್ಯ ಅಭಿಯಂತರರು (ಯ.ವ) ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, 2021–22ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ POW ಕಾರ್ಯಕ್ರಮದಡಿ ವಾರ್ಡ್‌ವಾರು ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಮಂಜೂರಾಗಿದ್ದು, ಅದರಂತೆ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಮಾನ್ಯ ಆಡಳಿತಗಾರರು, ಬೃ.ಬೆಂ.ಮ.ಪಾ. ರವರಿಗೆ ಸಲ್ಲಿಸಲಾಗಿದ್ದು, ಅದರಂತೆ ವಾರ್ಡ್ ಸಂಖ್ಯೆ:01ರಲ್ಲಿ Improvements roads and drains at Vikasa badavane main and cross roads inn Kempegowda ward no-01 Yelahanka ward no-01 of Yelahanka sub division ಕಾಮಗಾರಿಗೆ ಬೆಂಗಳೂರು ವೃತ್ತದ ಲೋಕೋಪಯೋಗಿ ಇಲಾಖೆಯ ದರಪಟ್ಟಿ 2018–19ರಂತೆ ಅಂದಾಜು ಪಟ್ಟಿಯನ್ನು ರೂ.30.00ಲಕ್ಷಗಳಿಗೆ ತಯಾರಿಸಿ ಆಡಳಿತಾತ್ಮಕ, ತಾಂತ್ರಿಕ ಮಂಜೂರಾತಿಗಾಗಿ ಹಾಗೂ ಡಿಟಿಎಸ್ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಮಾನ್ಯ ಮುಖ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಆ/ಪಿ.ಆರ್/93/2021–22, ದಿನಾಂಕ:06–07–2021ರ ಆದೇಶದಲ್ಲಿ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡುವ ವ್ಯವಸ್ಥೆಯನ್ನು ಬಿಬಿಎಂಪಿ ಅನುದಾನಗಳಿಗೆ ಆಯಾ ವಲಯ ಮುಖ್ಯ ಅಭಿಯಂತರರ ಕಛೇರಿಯಲ್ಲಿ ಹಾಗೂ ಸರ್ಕಾರದ ಅನುದಾನಗಳಿಗೆ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಅನುಮೋದಿತ ಕ್ರಿಯಾಯೋಜನೆಯಂತೆ ಕಾಮಗಾರಿಗಳಿಗೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ನಿರ್ವಹಣೆ ಪೂರ್ಣ ಛಾಯಾಚಿತ್ರಗಳೊಂದಿಗೆ ಅನ್ವಯವಾಗುವ ನಿರ್ವಹಣೆ ಕಾಮಗಾರಿಗಳಿಗೆ ರಸ್ತೆ ಇತಿಹಾಸ, ಆಡಳಿತಾತ್ಮಕ ಅನುಮೋನದ ಮತ್ತು ತಾಂತ್ರಿಕ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆಗಳನ್ನು ಪೂರೈಸಿ ಟೆಂಡರ್ ಅಂತಿಮಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮೊದಲು ಜಾಬ್ ಸಂಖ್ಯೆ ಪಡೆಯಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ. ಮುಂದುವರೆದು, ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ: ಬಿ12(1)ಪಿಆರ್/394/2020–21, ದಿನಾಂಕ:04–02–2021ರಲ್ಲಿ ನೀಡಿರುವ ಅಧಿಕಾರದನ್ವಯ ಸದರಿ ಕಾಮಗಾರಿಗೆ ಆಡಳಿತಾತ್ಮಕ, ತಾಂತ್ರಿಕ ಮಂಜೂರಾತಿಗಾಗಿ ಹಾಗೂ ಡಿಟಿಎಸ್ ಅನುಮೋದನೆ ನೀಡಲು ಮೆಮೋ ತಯಾರಿಸಿ ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ. ಮುಖ್ಯ ಅಭಿಯಂತರರು ಯಲಹಂಕ ವಲಯ
6	ಮು. ಕ್ರ (ಯವ)

ವಿಷಯ ...

ಕಂಡಿಕೆ ಸಂಖ್ಯೆ

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ:– Improvements roads and drains at vikasa badavane main and cross roads in Kempegowda ward no 01 of Yelahanka sub division. ಎಂಬ ಕಾಮಗಾರಿಯ ಟೆಂಡರ್ ಮೌಲ್ಯಮಾಪನದ ಬಗ್ಗೆ.

ಉಲ್ಲೇಖ:

1. ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/YNK.D/ E-PMT/15/2021-22 dated:15-12-2021.

* * * * *

7) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕಾರ್ಯಗಳ ಅಭಿವೃದ್ಧಿಗಾಗಿ 2021–22ನೇ ಸಾಲಿನ ವಾರ್ಷಿಕ ಆಯವ್ಯಯದ ಕಾರ್ಯಕ್ರಮದ ಅನುದಾನದಡಿಯಲ್ಲಿ ವಾರ್ಡ್‌ನಂ–01ರ ವ್ಯಾಪ್ತಿಯಲ್ಲಿ ಬರುವ ವಿಕಾಸ ಬಡಾವಣೆ ಮುಖ್ಯ ಮತ್ತು ಅಡ್ಡರಸ್ತೆಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಯ ವಿವರ ಈ ಕೆಳಕಂಡಂತಿದೆ.

Sl No	Name of work	Estimate cost Rs in Lakhs
01	Improvements roads and drains at vikasa badavane main and cross roads in Kempegowda ward no 01 of Yelahanka sub division.	30.00
	Total	30.00

8) ಈ ಮೇಲ್ಕಂಡ ಕಾಮಗಾರಿಗೆ ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರಿಂದ ಅನುಮೊದನೆ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಗೆ 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗಳನ್ವಯ ರೂ.30.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಮುಖ್ಯ ಅಭಿಯಂತರರು ಯಲಹಂಕ ವಲಯರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಸಂಖ್ಯೆ ಬೃ.ಬೆಂ.ಮ.ಪಾ/ ಮು.ಅ/ತಾ.ಮಂ/ಯ.ವ./ಪಿ.ಆರ್/67/2021–22 ದಿನಾಂಕ:13–12–2021 ರಂತೆ ತಾಂತ್ರಿಕ ಮಂಜೂರಾತಿಯನ್ನು ಮತ್ತು ಕರಡು ಟೆಂಡರ್ ಶೆಡ್ಯೂಲ್ – ಬಿ ಗೆ ಅನುಮೋದನೆ ನೀಡಿರುತ್ತಾರೆ.

9) ಈ ಮೇಲ್ಕಂಡ ಕಾಮಗಾರಿಗೆ ಸಂಬಂದಿಸಿದಂತೆ ಉಲ್ಲೇಖ (1) ರಂತೆ ದಿನಾಂಕ: 15–12–2021 ರಂದು KTPP.Act and KW-4 Standard Tender Document ಅನುಸಾರ E-Procurement ಮುಖಾಂತರ ಟೆಂಡರ್ ಕರೆದಿದ್ದು, ಸದರಿ ಟೆಂಡರ್ ಪ್ರಕಟಣೆಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಮುಖಾಂತರ ಕನ್ನಡ ಪ್ರಭಾ ದಿನಪತ್ರಿಕೆ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಯಲ್ಲಿ ದಿನಾಂಕ:16–12–2021 ರಂದು ಪ್ರಕಟಿಸಲಾಗಿರುತ್ತದೆ.

ಸಂಖ್ಯೆ

ಟಪ್ಪಣಿಗಳು ಮತ್ತು ಆಜ್ಞೆಗಳು

ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡತಿರುತ್ತದೆ.

ಕ್ರ.ಸಂ	ಅಂಶಗಳು	ವಿವರಗಳು
1	ಕೆಲಸದ ಹೆಸರು	Improvements roads and drains at vikasa badavane main and cross roads in Kempegowda ward no 01 of Yelahanka sub division.
2	ಅಂದಾಜು ಮೊತ್ತ	ರೂ. 30.00 ಲಕ್ಷಗಳು
3	ಇಂಡೆಂಟ್ ನಂ	BBMP/2021-22 /OW/ Work_ INDENT 49169
4	ಅನುದಾನದ ಯೋಜನೆ ಹೆಸರು	2021-22 ನೇ ಸಾಲಿನ ಆಯವ್ಯಯದ ವಾರ್ಷಿಕ ನಿರ್ವಹಣೆ
5	ಲೆಕ್ಕಶೀರ್ಷಿಕೆ	-
6	ಆಡಳಿತಾತ್ಮಕ ಅನುಮೋದನೆ	ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರಿಂದ ಪಡೆಯಲಾಗಿದೆ.
7	ತಾಂತ್ರಿಕ ಮಂಜೂರಾತಿ ಮೊತ್ತ	ರೂ.30.00 ಲಕ್ಷಗಳು
8	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆ:ಬ್ಯಬೆಂ.ಮ.ಪಾ/ಮು.ಅ/ಯವ/ತಾ.ಮಂ /67/2021-22ದಿ:13-12-2021. ರಂತೆ
9	ಟೆಂಡರ್‌ಗೆ ಇಟ್ಟ ಮೊತ್ತ	ರೂ. 26.74 ಲಕ್ಷಗಳು
10	ಅನ್ ಲೈನ್ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	28-12-2021 upto 16 00 hrs
11	ಅನ್ ಲೈನ್ ಇ - ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ	29-12-2021 after 16 00 hrs

10) ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂದಿಸಿದಂತೆ ದಿನಾಂಕ:29-12-2021 ರಂದು ಟೆಂಡರ್‌ಅನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಹತ್ತುಜನ ಗುತ್ತಿಗೆದಾರರು ಭಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1 Sri R RANGANATH
2 Sri G VENKATE GOWDA
3. Sri K VENKATA RAJU
4 Sri SHIVAKUMAR B V
5 Sri RAJESWAREN SATHEESH (SATHYA CONSTRUCTIONS)
6. Sri H S Prakash
7 Sri R KESHAVA REDDY
8. Sri G MAHENDRA (SREE MANOJAVA ENTERPRISES)
9 Sri MANJUNATHA B (SRI MARUTHI CONSTRUCTION AND CO)
10 Sri RAJU CHENNIYAPPA

11) ಮೇಲ್ಕಂಡ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದು, ಬಿಡ್ಡುದಾರರ ದಾಖಲೆಗಳನ್ನು ಪರಿಶೀಲಿಸಲಾಗಿ, 1) Sri R RANGANATH , 2) Sri G VENKATE GOWDA, 3) Sri K VENKATA RAJU, 4) Sri SHIVAKUMAR B V, 5) Sri RAJESWAREN SATHEESH (SATHYA CONSTRUCTIONS) 6) Sri H S Prakash , 7) Sri R KESHAVA REDDY 8) Sri G MAHENDRA (SREE MANOJAVA ENTERPRISES) 9) Sri MANJUNATHA B (SRI MARUTHI CONSTRUCTION AND CO) 10) Sri RAJU CHENNIYAPPA ಹತ್ತುಜನ ಬಿಡ್ಡುದಾರರು ನಮೂದಿಸಿರುವ ದರಗಳ

ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2018–19ನೇ ಸಾಲಿನ ಅನುಮೋದಿತ ದರಗಳಿಗೆ ಹಾಗೂ ಪರಿಷ್ಕೃತ ದರಗಳಿಗೆ ಹೊಲಿಸಿದಾಗ.	ಗುತ್ತಿಗೆ ದಾರರು ನಮೂದಿಸಿರುವ ದರಗಳು	2018–19ನೇ ಸಾಲಿನ ಧರಗಳಿಗೆ ಹಾಗೂ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ ವಾರು	ಪರಾ
01	R RANGANATH	2674905.22	2300428.23	(–)14.00% ಕಡಿಮೆ	
02	G VENKATE GOWDA		2335184.59	(–)12.70% ಕಡಿಮೆ	✓
03	K VENKATA RAJU		2395203.16	(–)10.46% ಕಡಿಮೆ	
04	SHIVAKUMAR B V		2409257.80	(–)9.93% ಕಡಿಮೆ	
05	RAJESWAREN SATHEESH (SATHYACONSTRUCTIONS		2484986.71	(–)7.10% ಕಡಿಮೆ	
06	H S Prakash		2499544.53	(–)6.56% ಕಡಿಮೆ	
07	R KESHAVA REDDY		2514150.38	(–)6.01% ಕಡಿಮೆ	
08	G MAHENDRA (SREE MANOJAVA ENTERPRISES		2569013.85	(–)3.96% ಕಡಿಮೆ	
09	MANJUNATHA B (SRI MARUTHI CONSTRUCTION AND CO)		2569504.30	(–)3.94% ಕಡಿಮೆ	
10	RAJU CHENNIYAPPA		2697007.11	(+)0.83% ಹೆಚ್ಚು	

12) ಮೇಲ್ಕಂಡ ನಾಲ್ಕು ಜನ ಗುತ್ತಿಗೆದಾರರು ಸಲ್ಲಿಸಿರುವ ದಾಖಿಲಾತಿಗಳನ್ನು ಪರಿಶೀಲಿಸಲಾಗಿ Sri,R RANGANATH ರವರು ಟೆಂಡರ್ ನಿಯಮದ ಪ್ರಕಾರ ಇ.ಎಂ.ಡಿ. Declaration ಪ್ರತಿಯನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಬೇಕಾಗಿತ್ತು. ಆದರೆ ಸದರಿಯವರು EMD Declaration ಪ್ರತಿಯನ್ನು ಸಲ್ಲಿಸದ ಕಾರಣ ಸದರಿಯವರ ಬಿಡ್ಡನ್ನು ತಿರಸ್ಕರಿಸಲಾಗಿದೆ.

13) ಮುಂದುವರೆದು ಉಳಿದ ಒಂಬತ್ತು ಜನ ಬಿಡ್ದುದಾರರು ಸಲ್ಲಿಸಿರುವ ದಾಖಿಲಾತಿಗಳು ಸಮರ್ಪಕವಾಗಿದ್ದು, ಒಂಬತ್ತು ಜನ ಬಿಡ್ದುದಾರರಲ್ಲಿ ಅತಿ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾದ**Sri. G VENKATE GOWDA** ರವರು ನಮೂದಿಸಿರುವ ದರಗಳಾದ ರೂ. **23,35,184.59.** ಗಳಿದ್ದು 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಎಸ್.ಆರ್ ದರಗಳಿಗೆ ಹೋಲಿಸಿದಾಗ ಶೇಕಡ (–)12.70% ಕಡಿಮೆ ದರಗಳಾಗಿರುತ್ತದೆ . ಆದುದರಿಂದ ಸದರಿಯವರ ದರಗಳನ್ನು ಅನುಮೋದಿಸಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

05/02/2022

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

14) ಮುಖ್ಯ ಅಭಿಯಂತರರು (ಯಲಹಂಕ ವಲಯ)

YA

ಪು.ತಿ.ನೋ

ವಿಷಯ :

ಪುಟದ ಸಂಖ್ಯೆ ..... 06 .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು

ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ ದಿನಾಂಕ:29-12-2021ರಂದು ಟೆಂಡರ್ ತೆರೆಯಲಾಗಿದ್ದು, ಹತ್ತು ಜನ ಗುತ್ತಿಗೆದಾರರು ಟೆಂಡರ್ ಪ್ರಕಿಯೆಯಲ್ಲಿ ಭಾಗವಹಿಸಿದ್ದು, ಗುತ್ತಿಗೆದಾರರ ದಾಖಲಾತಿಗಳನ್ನು ಪರಿಶೀಲಿಸಲಾಗಿ, Sri.R.Ranganthರವರು ಟೆಂಡರ್ ನಿಯಮದ ಪ್ರಕಾರ ಇ.ಎಂ.ಡಿ ಡಿಕ್ಲರೇಷನ್ ಪ್ರತಿಯನ್ನು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸದ ಕಾರಣ ಸದರಿಯವರ ಬಿಡ್‌ನ್ನು ತಿರಸ್ಕರಿಸಲಾಗಿರುತ್ತದೆ. ಉಳಿದ ಹದಿನಾರು ಜನ ಸಲ್ಲಿಸಿರುವ ದಾಖಲಾತಿಗಳು ಸಮರ್ಪಕವಾಗಿದ್ದು, ಅತಿ ಕಡಿಮೆ ದರ ನಮೂದಿಸಿರುವ Sri.G.Venkategowda ರವರು ನಮೂದಿಸಿರುವ ಮೊತ್ತ ರೂ23,35,184.59ಗಳಾಗಿದ್ದು, 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಎಸ್‌ಆರ್ ದರಿಗಳಿಗೆ ಹೋಲಿಸಿದಾಗ ಶೇಕಡಾವಾರು(-)12.70%ರಷ್ಟು ಕಡಿಮೆ ದರಗಳನ್ನು ನಮೂದಿಸಿ ಅರ್ಹ ಗುತ್ತಿಗೆದಾರರಾಗಿರುತ್ತಾರೆ. ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಅನುಮೋದನೆ ಕೋರಿರುವುದರಿಂದ ಮುಂದಿನ ಆದೇಶಕ್ಕೆ ಸಲ್ಲಿಸಿದೆ.

15) ಮು.ಅ(ಯಾ)

ಕಾರ್ಯಪಾಲಕ ಅಭಿಯಂತರರು,
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

16) ಅನುಮತಿಸಲಾಗಿದೆ